ಲಾಲ್‌ಬಾಗ್ ಪ್ರವೇಶ ದರವನ್ನು ನಿಗದಿಗೊಳಿಸಿರುವ ಬಗ್ಗೆ.

೪೮೩. ಶ್ರೀ ಎ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ವ್ಯವಸಾಯ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

೧) ಬೆಂಗಳೂರು ನಗರದಲ್ಲಿರುವ ಲಾಲ್‌ಬಾಗ್ ಉದ್ಯಾನವನಕ್ಕೆ ಪ್ರತಿದಿನ ಅಸಂಖ್ಯಾತ ಪ್ರವಾಸಿಗಳು ಬರುತ್ತಿರುವುದು ನಿಜವಲ್ಲವೇ ;

೨) ಹಾಗಿದ್ದಲ್ಲಿ ಊಟಿಯಲ್ಲಿರುವ ಬಟಾನಿಕಲ್ ಗಾರ್ಡನ್‌ಗೆ ಪ್ರವೇಶ ದರ ನಿಗದಿ ಪಡಿಸಿರುವಂತೆ ಲಾಲ್‌ಬಾಗ್ ಕೂಡ ಅಲ್ಪ ಮೊತ್ತದ ಪ್ರವೇಶದರವನ್ನು ನಿಗದಿಗೊಳಿಸಿ ಆ ಹಣದಿಂದ ಪ್ರವಾಸಿಗರಿಗೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡುವುದರ ಜೊತೆಗೆ ಉದ್ಯಾನವನವನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಪಡಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಸಚಿವರು).—

೧) ಹೌದು.

೨) ಇಂತ ಯಾವುದೇ ಪ್ರಸ್ತಾವನೆ ಸದ್ಯಕ್ಕೆ ಇರುವುದಿಲ್ಲ.

ಎಸ್. ಎಸ್. ಎಲ್. ಸಿ. ಸೇವಾ ವ್ಯವಹಾರಗಳು

೪೯೭. ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ).—ಮಾನ್ಯ ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ;

ಅ) ಇತ್ತೀಚಿನ ಎಸ್. ಎಸ್. ಎಲ್. ಸಿ. ಪರೀಕ್ಷೆಗಳಿಗೆ ಕುಳಿತಿದ್ದ (ಬಾಲಕ–ಬಾಲಕಿ) ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

ಆ) ಇವರುಗಳಲ್ಲಿ ತೇರ್ಗಡೆಯಾದವರ ಸಂಖ್ಯೆ ಎಷ್ಟು ;

ಇ) ಇವರುಗಳಲ್ಲಿ ವಿದ್ಯಾರ್ಥಿಗಳೆಷ್ಟು ಮತ್ತು ವಿದ್ಯಾರ್ಥಿನಿಯರೆಷ್ಟು ?

ಈ) ಇವರುಗಳಲ್ಲಿ ಸರಕಾರಿ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದವರ ಸಂಖ್ಯೆ ಎಷ್ಟು ಹಾಗೂ ಖಾಸಗಿ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದವರ ಸಂಖ್ಯೆ ಎಷ್ಟು ;

ಉ) ಸರಕಾರಿ ಪಾಠಶಾಲೆಗಿಂತ ಖಾಸಗಿ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು ಹೆಚ್ಚಿನ ರ್ಯಾಂಕುಗಳನ್ನು ಗಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್ (ಶಿಕ್ಷಣ, ಯುವಜನ ವ್ಯವಹಾರಗಳು, ಕ್ರೀಡೆಗಳು, ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು).—

ಅ) ಒಟ್ಟು ೪೮೦೨೬ ಬಾಲಕರು–೩೧೮೫೧ ಬಾಲಕಿಯರು–೧೬೨೩೧.

ಆ) ಒಟ್ಟು ೨೬೧೨೭

ಇ) ವಿದ್ಯಾರ್ಥಿಗಳು ೧೬೬೫೧
ವಿದ್ಯಾರ್ಥಿನಿಯರು ೯೪೭೬

ಒಟ್ಟು ೨೬೧೨೭

ಈ) ೧) ಸರಕಾರಿ ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು — ೧೧೪೨೫
ವಿದ್ಯಾರ್ಥಿನಿಯರು ೫೦೮೨೨

೨) ಖಾಸಗಿ ಪಾಠಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಗಳು — ೨೦೪೨೬
ವಿದ್ಯಾರ್ಥಿನಿಯರು ೧೧೧೪೯

ಉ) ಹೌದು.